॥ ಶ್ರೀಗುರುಭ್ಯೋ ನಮಃ, ಹರಿಃ ಓಂ ॥

## ಶ್ರೀ ರಂಗಪ್ಪದಾಸರು (ಅಂಕಿತ ತಂದೆಗೋಪಾಲವಿಠಲ)ರಿಂದ ವಿರಚಿತವಾದ ಶ್ರೀಗಣೇಶಾಂಶರಾದ ಶ್ರೀಭಾಗಣ್ಣ (ಶ್ರೀಗೋಪಾಲ)ದಾಸರ ಚರಿತ್ರೆಯ ಪದ ಹಾಗೂ ಈ ಪದವನ್ನಾಧರಿಸಿದ ಶ್ರೀಗೋಪಾಲದಾಸರ ಚರಿತ್ರೆಯ ಸಾರ ಸಂಗ್ರಹ

ಶ್ರೀಗೋಪಾಲದಾಸರ ಆರಾಧನೆ – ಪುಷ್ಯಮಾಸ ಕೃಷ್ಣಪಕ್ಷದ ಅಷ್ಟಮೀ

ಶ್ರೀಭಾಗಣ್ಣದಾಸರ (ಅಂಕಿತ ಗೋಪಾಲವಿಠಲ) ತಮ್ಮಂದಿರೂ, ಶಿಷ್ಯರೂ, ಅಪರೋಕ್ಷಜ್ಞಾನಿಗಳೂ ಆದ ಶ್ರೀ ರಂಗಪ್ಪದಾಸರು (ಅಂಕಿತ ತಂದೆಗೋಪಾಲವಿಠಲ)ರಿಂದ ವಿರಚಿತವಾದುದು. ಶ್ರೀಗೋಪಾಲ ದಾಸರ ದಿವ್ಯ ಜೀವನ ಚರಿತ್ರೆಯನ್ನು ಈ ದೀರ್ಘಕೃತಿಯಲ್ಲಿ ಶ್ರೀರಂಗಪ್ಪದಾಸರು ಸಂಗ್ರಹಿಸಿದ್ದಾರೆ. ಈ ಚರಿತ್ರೆಯ ಪದದಲ್ಲಿ ಶ್ರೀವಿಜಯರಾಯರಿಂದ ಭಕ್ತಿಯಲಿ ಭಾಗಣ್ಣ ಎಂಬ ಕೀರ್ತಿಗೆ ಭಾಜನರಾಗಿದ್ದ, ಶ್ರೀವಿಜಯರಾಯರ ಪುಣ್ಯದ ಪುತ್ರರಾದ ಶ್ರೀಗೋಪಾಲದಾಸರ ದಿವ್ಯಜೀವನದ ಪರಿಚಯವನ್ನು ಮಾಡಿಕೊಟ್ಟು ಸಮಸ್ತ ಭಕ್ತಸಮೂಹಕ್ಕೆ ಉಪಕಾರವನ್ನು ಮಾಡಿದ್ದಾರೆ ದಾಸರ ಅನುಜರು. ಈ ಕೃತಿಯ ಮೂಲವನ್ನು ನೀಡಿ, ಈ ಕೃತಿಯಲ್ಲಿ ನಿರೂಪಿಸಿರುವಂತೆ ಶ್ರೀಭಾಗಣ್ಣ(ಶ್ರೀಗೋಪಾಲ)ದಾಸರ ಚರಿತ್ರೆಯನ್ನು ಯಥಾಮತಿ ದಾಸರ ಕೃಪಾಲೇಶದ ಆಕಾಂಕ್ಷೆಯಿಂದ ಸಂಗ್ರಹಿಸಲಾಗಿದೆ.

ವಿಘ್ನೇಶ್ವರ ಸ್ತೋತ್ರ

ಪಂಚಭೇದ ಜ್ಞಾನವರುಪು ವಿ।ರಿಂಚಿಜನಕನ ತೋರು ಮನದಲಿ । ವಾಂಛಿತಪ್ರದ ಒಲುಮೆಯಿಂದಲಿ ದಾಸನೆಂದರಿದೂ ॥ ಪಂಚವಕ್ತ್ರನ ತನಯ ಭವದೊಳು । ವಂಚಿಸದೆ ಸಂತೈಸು ವಿಷಯದಿ। ಸಂಚರಿಸದಂದದಲಿ ಮಾಡು ಮನಾದಿ ಕರಣಗಳಾ ॥ 16 ॥

ಏನುಬೇಡುವುದಿಲ್ಲ ನಿನ್ನ ಕು।ಯೋನಿಗಳು ಬರಲಂಜೆ ಲಕುಮೀ। ಪ್ರಾಣಪತಿ ತತ್ತ್ವೇಶರಿಂದೊಡ –ಗೂಡಿ ಗುಣಕಾರ್ಯಾ ॥ ತಾನೆ ಮಾಡುವನೆಂಬ ಈ ಸು।ಜ್ಞಾನವನೆ ಕರುಣಿಸುವುದೆಮಗೆ ಮ।ಹಾನುಭಾವ ಮುಹುರ್ಮುಹು ಪ್ರಾರ್ಥಿಸುವೆನಿನಿತೆಂದೂ ॥ 17 ॥

– ಶ್ರೀಹರಿಕಥಾಮೃತಸಾರ ವಿಘ್ನೇಶ್ವರ ಸ್ತೋತ್ರ ಸಂಧಿ – ಸಂಧಿ 28

ಆಗತಾದಿತ್ರಿಕಾಲಜ್ಞಂ ಆಗಮಾರ್ಥವಿಶಾರದಮ್ ।
ತ್ಯಾಗಭೋಗಸಮಾಯುಕ್ತಂ ಭಾಗಣ್ಣಾರ್ಯಗುರುಂ ಭಜೇ ॥ 1 ॥
ಭೂಪಾಲನತಪಾದಾಬ್ಜಂ ಪಾಪಾಲಿಪರಿಹಾರಿಣಮ್ ।
ಗೋಪಾಲದಾಸಮೀಡೇಹಂ ಗೋಪಾಲಹರಿದರ್ಶನಮ್ ॥ 2 ॥

## ಶ್ರೀ ರಂಗಪ್ಪದಾಸರು (ಅಂಕಿತ ತಂದೆಗೋಪಾಲವಿಠಲ)ರಿಂದ ವಿರಚಿತವಾದ ಶ್ರೀಗಣೇಶಾಂಶರಾದ ಶ್ರೀಭಾಗಣ್ಣ (ಶ್ರೀಗೋಪಾಲ)ದಾಸರ ಚರಿತ್ರೆಯ ಪದ

ರಾಗ : ಸೌರಾಷ್ಟ್ರ        ತಾಳ : ತ್ರಿಪುಟ ತಾಳ

ಭಜಿಸಿಬದುಕಿರೊ ಅಜನಪಿತ ಶ್ರೀವಿಜಯವಿಟ್ಠಲರಾಯನಾ ।
ಭಜನೆಮಾಡುವ ವಿಜಯರಾಯರೆ ನಿಜಗುರುಗಳೆಂದೆನಿಪನಾ ॥ ಪಲ್ಲವಿ ॥
ಮೂಲಪೇಳುವೆ ವಿಶಾಲಮಹಿಮ ಸು।ಶೀಲವಿಜಯರಾಯರ ॥
ಕಾಲಕಾಲಕೆ ಸ್ಮರಿಪ ಶ್ರೀಗೋ।ಪಾಲದಾಸರಾಯರಾ ॥ 1 ॥

ದಧಿಪಾಷಾಣದಧಿಪನೆನಿಸುವ । ಮುದಗಲಾಖ್ಯ ಪುತ್ರನಾ ॥
ಉದರದಲಿ ಉದುಭವಿಸಿದರು ನಾಲ್ವರದರೊಳಗೆ ಬುಧವರ್ಯನಾ ॥ 2 ॥
ಪುಟ್ಟಿದಾಗಲೆ ಪಿತ ಮುರಾರಿಯ । ಶಿಷ್ಟಶಿಶುವೆಂದೆನುತಲಿ ।
ಇಟ್ಟ ಈ ವಸುಧಿಯೊಳು ಪೆಸರನು । ಧಿಟ್ಟ ಭಾಗಣ್ಣನೆನುತಲಿ ॥ 3 ॥
ಪಂಚವತ್ಸರ ಬರಲು ಮನೆಯೊಳು । ಸಂಚಿತಸಂಪತ್ತನು ।
ಪಂಚಬಾಣನ ಪಿತನ ಆಜ್ಞದಿ । ಕೊಂಚುವಾಗೆ(ವಾಗಲೆಂ)॥ 4 ॥
ವೆಂಕಮ್ಮನು ವೆಂಕಟರಮಣನ್ನ ಸ್ಮರಿಸುತ । ಮಂಕುಮಗುಗಳ ಸಹಿತದಿ ।
ಸಂಕಟಾಬಡುತಲ್ಲೇ ನಿಂತರಾ । ಸುಂಕಪುರದಾ ಸ್ಥಳದಲಿ ॥ 5 ॥
ಉದರಗೋಸುಗವಾಗಿ ಮತ್ತೆ । ಸದನಗಳು ಬಲು ತಿರುಗುತಾ ।
ವಿಧಿಲಿಖಿತ ತಪ್ಪದುಯೆನುತಾ ಕೃಷಿ । ಆದರ ವ್ಯಾಪಾರ ನಡಿಸುತಾ ॥ 6 ॥
ಏಳು ವರ್ಷವು ಸಾಗಿಸಿ ಶ್ರಮ । ತಾಳದಲೆ ವಟ ವೃಕ್ಷದಾ ॥
ಮೂಲದಲಿ ಮಲಗಿರಲು ದೇಹದ । ಮ್ಯಾಲೆ ಸರ್ಪನಂದದಿ ॥ 7 ॥
ಆಡುತಿರಲದು ಕಂಡು ಮಕ್ಕಳು । ಓಡಿ ಪೇಳ್ದರು ಜನನಿಗೆ ॥
ನೋಡಬಂದರು ಜನನಿ ಜನರು ಕೊಂ।ಡಾಡಿದರು ಈ ಮಹಿಮಿಗೆ ॥ 8 ॥
ವೃಕ್ಷವೇರಲು ಸರ್ಪ, ಚಿಂತಿಸಿ । ರಕ್ಷಕತ್ವವು ಇವರನೆ ।
ಲಕ್ಷ್ಮೀರಮಣನೆ ರಕ್ಷಿಸುವನೆಂ।ದೀಕ್ಷಿಸೀ ಉತ್ತನೂರಿಗೆ ॥ 9 ॥
ಬಂದು ದೇವರ ಗುಡಿಪ್ರವೇಶಿಸಿ । ನಿಂದು ನಲಿನಲಿದಾಡುತಾ।
ಮಂದಿಗಳ ನೋಡಲ್ಕೆ ಮೌನದಿ । ಮಂದಮತಿಯಂತೆ ತೋರುತಾ ॥ 10 ॥
ನಿರುತ ಸೇವೆಯ ಮಾಡೆಪುರಜನ । ಹರಿಯ ಮಂದಿರದ್ವಾರವ ॥
ಭರದಿ ಬಂಧಿಸಿ ತೆರಳಾಕ್ಷಣ । ಕರವ ಭಾರಿಸಿ(ಜೋಡಿಸಿ) ತುತಿಸುವಾ ॥ 11 ॥
ವೇಣುಗಾಯನ ಪ್ರಿಯನು ಎದುರಿಲಿ । ಕುಣಿವ ನೂಪುರಶಬ್ದವು ।
ಮನಿಗಳಲ್ಲಿಹ ಮನುಜರಾಲಿಸೆ । ಮನಕೆ ಕೇವಲ ಮೋದವು ॥ 12 ॥
ಮೌನವ್ರತವನು ಮಾಡುತಲಿರೆ ಇದೆ । ಮನುಜನಾ ಮಾತಾಳ್ವನೊ ।
ಏನಿದಚ್ಚರವೆನುತ ಬಾಧಿಸೆ । ನಾನಾಕ್ಲೇಶವ ಬಟ್ಟನು ॥ 13 ॥
ಶೈವಪಣವನು ಮಾಡಿಕೇಳುತ । ಇವರ ಜಯಪತ್ರ ಕೇಳಿದಾ ।
ತವಕ ಲಿಖಿಸಿ ಕೊಡೆನಲು ಪ್ರಾರ್ಥಿಸೆ । ಕವನ ಪೇಳಲು ತೆರಳಿದಾ ॥ 14 ॥
ಸುತರ ಸ್ವಸ್ಥಿಯಗೋಸುಗದಿ ಭೂ।ಪತಿಯ ಸೇವೆಯೊಳಿಟ್ಟರೆ ।
ಚತುರ(ದ)ರಲಿ ಚೋರತ್ವ ಕಲ್ಪಿಸಿ । ಅತಿದುರುಳ ಬಾಧಿಸುತಿರೆ ॥ 15 ॥
ಹರಿಯ ಧ್ಯಾನದೊಳಿರಲು ತರುಳರ । ಘೋರಬಾಧೆಯ ತಿಳಿದನು ।
ಭರದಿ ಇಲ್ಲಿಂದತುಳ ಮಹಿಮೆಯ । ತೋರಲವರನು ಬಿಟ್ಟನು ॥ 16 ॥
ಅಂದು ವೇಗದಿ ಮಂದಿರಕೆ ಬಂದು । ನಿಂದು ಮಾತೆಯ ಕರೆಯಲು ।
ಮಂದಹಾಸದಿ ಅನುಜರೀರ್ವರು । ಬಂದಸ್ಥಿತಿಯನು ಪೇಳಲು ॥ 17 ॥
ಇನಿತು ಪರಿದ್ವಯ ವತ್ಸರದೊಳು । ಜನನಿಘರುಷವ ತೋರಿದಾ ।
ವನಜನಾಭನ ಕೃಪೆಯು ಇಂದಿನ । ದಿನ ಪ್ರವೇಶೆಂದು ಪೇಳಿದಾ ॥ 18 ॥

ಹರಿಯ ಕರುಣ ಉಣಲಿ ಇಲ್ಲವು। ನಿರುತ ಭಿಕ್ಷವ ಬೇಡಲು।
ಎರಡು ವತ್ಸರ ಮೌನವೊಹಿಸಿ। ಸರಸ ವಚನಗಳಾಡಲು ॥ 19 ॥
ಇಂದಿರೇಶನ ಕರುಣದಿಂದಲಿ। ಬಂದ ಸಾಮಗ್ರಿ ನೋಡುತಾ।
ಒಂದು ನಾಳಿಗೆ ಬೇಡವೆನ್ನಲು(ವೆನೆ)। ಸುಂದರಾಂಗಿಯು ಲೋಭದಿ ॥ 20 ॥
ಗಡಿಗಿ ಏಳನು ತುಂಬಿ ಭೂಮಿಯೊಳಡಗಿಸೆರಡನೆ ದಿನದಲಿ। (ಮಧ್ಯಾಹ್ನದಿ)।
ನೋಡಿ ಕ್ರಿಮಿರಾಸಿಯನು ಇವರ। ಬೇಡಿಕೊಂಡಳು ಕರುಣದಿ ॥ 21 ॥
ಮಂದಹಾಸದಿ ಮೂರು ಮ್ಯಾಲಕೆ। ತಂದು ವಿಪ್ರರಿಗುಣಿಸಿದ।
ಅಂದವಾದೀ(ಛಂದದಿಂದಲಿ) ನಾಲ್ಕು ಘಟಗಳು। ಮುಂದಕಿರಲೆಂದು ಪೇಳಿದಾ ॥ 22 ॥
ಭಾನುಉದಯದಲೆದ್ದು ಶ್ರೀಹರಿಧ್ಯಾನದಲ್ಲಿರೆ ಜನರಿಗೆ(ಬಂದವರಿಗೆ)।
ಶ್ರೀನಿವಾಸನ ಕೃಪೆಯ ಪೇಳಿದ। ನಾನಾಬಗೆ ಕೇಳ್ವವರಿಗೆ(ಬಂದವರಿಗೆ) ॥ 23 ॥
ಈ ಮಹತ್ಮರ ಕೂಡ ವಿಪ್ರನು। ಪ್ರೇಮವಚನಗಳಾಡುತಾ।
ಯಾಮರಾತ್ರಿಯುಗಮಿಸಿಪೋಗಲು। ತಾ ಮನದಿ ಚಿಂತೆಯ ಮಾಡುತಾ ॥ 24 ॥
ಮರಳೆ ಸಂಧ್ಯಾವಂದನೆಯ ಮಾಡಿ। ಕರದಿಂದರ್ಘ್ಯವ ಕೊಡುತಿರೆ।
ತರಣಿಯನು ಅಸ್ತಾದ್ರಿಯಲಿ ಕಂಡು। ಪರಮ ಹರುಷವ ಬಡುತಿರೆ ॥ 25 ॥
ಪರಿಪರೀ ಚರ್ಯ ಕಂಡು ರಾಜನು। ದರ್ಶನಾದೀತೆಂದನು।
ಹರಿಯ ಸನ್ನಿಧಿಕ್ಲಪ್ತ ದ್ರವ್ಯವು ಕರಿಯ ಕುದರಿಯ ಕೊಡುವನು ॥ 26 ॥
ಈ ಪರಿಂದಲಿ ಪೇಳಿ ಹವಿ(ಲಿ)ಕನ। ಭೂಪತಾ ಕಂಡಾಕ್ಷಣ।
ಈ ಪೃಥ್ವಿಪದ ನಿನಗೆ ತಪ್ಪದೆಂದೂ। ತಾ ಪೇಳಿದನು ಸುಲಕ್ಷಣಾ ॥ 27 ॥
ಧಾತ್ರಿಯೊಳು ಯಾದವಗಿರಿಯಸುತ್ಪಾತ್ರ ತಿಮ್ಮಣ್ಣನೆಂಬನಾ।
ತೀರ್ಥಯಾತ್ರೆಯ ನೆವನದಿಂದಾ ॥ ಕ್ಷೇತ್ರದಲಿ ವಾಸ ಮಾಡ್ದನಾ ॥ 28 ॥
ದೇಶ ದೇಶದ ಜನರುಗಳು ಬಂದು। ವಾಸವಾಗಿ ಇಪ್ಪರೋ।
ಶ್ರೀಶನಾಜ್ಞದಿ ಅವರವರ ಮನೋಭಿಲಾಷೆ ಪೂರೈಸುತಿಪ್ಪರೋ ॥ 29 ॥
ವೆಂಕಟಕೃಷ್ಣೆಂದು ಪದಗಳಿಗಂಕಿತವು ನೀಡುತಲಿರೆ।
ವೆಂಕಟೇಶನ ದಾಸವರ್ಯರು। ಸೋಂಕಿ ವಿಜಯದಿಂದ ಬರುತಿರೆ ॥ 30 ॥
ದಾಸವರ್ಯರು। ಕಂಡು ಇವರಿಗುಪದೇಶವನು ಕೊಡಲಾಕ್ಷಣಾ।
ಏಸು ಜನ್ಮದ ಸುಕೃತವೆನುತಲಿ। ಲೇಸು ಲೇಸೆಂದು ಮೆರದನಾ ॥ 31 ॥
ಉಡುಪಿ ಕೃಷ್ಣನ ದರುಶನಕೆ ಆಜ್ಞಾ। ಕೊಡಬೇಕೆನುತಲಿ ಕೇಳ್ದನು।
ತಡವ್ಯಾಕೆನುತಲಿ ಹರಿಸ್ತುತಿಯ ಮಾಡಿ। ಕೊಡುತ ಪೋಗಿಬಾರೆಂದನು ॥ 32 ॥
ಮಂಡಗದ್ದಿಯ ಭೀಮನೆಂಬುವ। ಕಂಡು ಪೂಜಿಸಿ ಕಳುಹಿದ।
ಗಂಡಿ ತ್ರಯದಲಿ ಸುಲಿಯೆ। ಶಿ(ಸಿ)ಗದಿರೆ । ದಂಡನಮಿಸಲುದ್ಧರಿಸಿದ ॥ 33 ॥
ಗೋಪಬಾಲಕನಾದ ಕೃಷ್ಣನ। ವ್ಯಾಪಾರಗಳ ಸ್ಮರಿಸಿದಾ।
ತಾ ಪುರಕೆ ಬರುತೋ(ಬಂದೋ)ರ್ವ ಮನುಜಗಪಾರಭಾಗ್ಯವ ತೋರಿದಾ ॥ 34 ॥
ಉದರ ಶೂಲಿಯು ಬಾಧಿಸಲು ಶ್ರೀಪದುಮನಾಭನ ಷಡ್ರಸಾ।
ಐದು ತಾಸಿಗೆ ಭುಂಜಿಸುವದೆನೆ। ಮುದದಿ ನಡೆಸಿದ ಮಾನಿಸಾ ॥ 35 ॥

ವಿಜಯರಾಯರ ಪಾದ ನಿರುತದಿ । ತ್ಯಜಿಸದಲೆ ಭಜಿಸುವರೊ ।
ವಿಜಯವಿಠ್ಠಲ ಪ್ರತಿಮೆಯನು ಕೊಡೆ । ಭಜಿಸಿ ಪೂಜಿಸಿ ನಲಿವರೋ ॥ 36 ॥
ರಾಜವಳಿಯ ಗ್ರಾಮದಲಿ ಹರಿ।ಪೂಜಿ ಮಾಡುತ ಗಿರಿಯಲಿ ।
ಮೂಜಗತ್ಪತಿ ರಥದೊಳಿಹನೆಂದು । ನೈಜದಲಿ ಪೇಳುತ್ತಲಿ ॥ 37 ॥
ಕ್ಷಾಮ ಪರಿಹರ ಮಾಳ್ಪದೆನುತಲಿ । ಗ್ರಾಮಿಕರು ಕರಮುಗಿಯಲು ।
ಅಮಹಾಮೂಢಮನುಜನಿಂದಲಿ । ಕ್ಷೇಮವಾಗೆ ಕೊಂಡಾಡಲು ॥ 38 ॥
ಇವರ ಸ್ತುತಿಸಲು ಸೂತಶಾಖದಿ । ಲವಣವಧಿಕ ಮಾಡಲು ।
ಲವಣಮಾನಿಜನಾರ್ದನಗರ್ಪಿಸಿ । ಸವಿದು ಭುಂಜಿಸಿ ಪೊಗಳಲು ॥ 39 ॥
ವೀರಗರ್ವಿಲಿ ಧೊರೆಯಗಳು । ಘೋರಿಸಲು ತನ್ನನುಜರಾ ।
ವಾರಿ ನೋಟದಿ ನೋಡಿ । ಪ್ರಾರ್ಥಿಸೆ । ಸೇರಿದರು ಸ್ವಪುರವನಾ ॥ 40 ॥
ಪುನಹ ಕೃಷ್ಣನ ದರುಶನಕೆ ತ।ಮ್ಮನುಜರಿಂದಲಿ ನಡೆದರು ॥
ಜನನರಹಿತನು ವನುತೆ ಗರ್ಭದಿ । ಜನಿಸೆ ದೃಶ್ಯನಾದನು ॥ 41 ॥
ಕ್ಷಿತಿಯೊಳಗೆ ತನಗಾದ ಅನುಭವ । ಅತಿಶಯವನು ಪೇಳುತಾ ।
ರತಿಪತಿಪಿತನನ್ನು ತನ್ನಯ । ಸುತನ ತೆರದಲಿ ಶೆಳೆವುತಾ ॥ 42 ॥
ಕ್ಷಿತಿಯೊಳಗೆ ಶ್ರೀರಂಗರಾಜನ । ಅತಿವಿಭವ ನೋಡೂವರೋ ।
ಕೃತಿ(ಕ್ಷಿತಿ)ಪತಿನಿಂದಾಸ್ತುತಿಯ ಮಾಡು।ತತಿ ಮುದವ ಬಡುತಿಹರೋ ॥ 43 ॥
ಭೂಸುರರು ನದಿಯಲ್ಲಿ ಬರುತಿರೆ । ಲೇಸು ಭೋಜನ ಬಯಸಲೂ ।
ದಾಸವರ್ಯರು ಅವರ ಮನೋ ಅಭಿ।ಲಾಷೆಯಂತಲಿ ಸಲಿಸಲು ॥ 44 ॥
ಅರೆ ಮಾತುಗಳಾಡುತಲಿ ಹಯ।ವೇರಿ ಬಂದನು ಬಳಿಯಲಿ ।
ಸೂರಿಜನಸಂಪ್ರೀಯನೆಂದು । (ತೋರಿ)ಸಾರಿದನು ಸಜ್ಜನರಲಿ ॥ 46 ॥
ತರುಣಿಕ್ಷೀರವು ತಂದು ಕೊಡುತಿರೆ । ಭರದಿ ಮರಳೊಳಗೆರೆದನು ।
ಮರಳಿ ಗುಡಿಯೊಳು ಕಂಡು ಬರುತಿರೆ । ಕರುಣನಿಧಿಯನು ತೋರ್ವನು ॥ 47 ॥
ಕುಂಡಲಾಗಿರಿಯಲ್ಲಿ ವಿಪ್ರನು । ಕಂಡು ವಿಜಯರಾಯರಾ ।
ದಂಡನಮನವ ಮಾಡಿ ಕೇಳ್ದನು।ದ್ದಂಡ ಕ್ಷಯರೋಗ ಕಳಿ ತ್ವರಾ ॥ 48 ॥
ಹರುಷದಿಂದುತ್ತುನೂರು ಸೇರಲು । ಪರಿಹರಾಗುವದೆಂದನೂ ॥
ಬರಲು ಭಕ್ರಿಯವೊಳಗೆ ನಾಲ್ವ।ತ್ತೊರುಷ ಆಯುವನಿತ್ತನು ॥ 49 ॥
ಸುಧಾಸುಪಾತ್ರದಿ ಪಿಡಿದ ಹರಿಯನು । ಮುದದಿ ಸ್ಮರಿಸುತ ಕೊಟ್ಟನು ।
ಪದುಮನಾಭನು ಕೋಪದಿಂದಿರೆ । ಶ್ರೀದ ಬಾರೆಂದು ಕರೆದನು ॥ 50 ॥
ಕರವೀರಪುರನಿಲಯ ಲಕುಮಿಯ । ಪರಮ ಹರುಷದಿ ತುತಿಸಿದಾ ।
ಶರಣರಿಗೆ ಆಪದವನೊದಗಲು । ಗುರು ದಯದಿ ಪರಿಹರಿಸಿದಾ ॥ 51 ॥
ಮಂದಹಾಸದಿ ರಾಘವೇಂದ್ರರ । ವೃಂದಾವನಕಭಿನಮಿಸಿದಾ ।
ಮುಂದೆ ನಡೆವ ವಿಚಿತ್ರಚರ್ಯಾ।ನಂದದಲಿ ಸಂಸ್ತುತಿಸಿದಾ ॥ 52 ॥
ಅನುಜ ಹರಿಯನು ಕಾಣದಲೆ ತನ್ನಮನದಿ ಸ್ಮರಿಸುತ ನಿಲ್ಲಲು ।
ಕನಕಗೀರೀಶನ ಪ್ರಾರ್ಥಿಸು(ತ) ಶ್ರೀ।ವನಿತೆಯರಸನ ತೋರಲು ॥ 53 ॥

ತೇರಿನುತ್ಸಹ ನೋಡಿ ಹರುಷದಿ। ಬಾರೊ ಮನ(ಮನೆಗೆ)ಕೆಂದು ಸ್ತುತಿಸಿದ।
ಪುರಕೆ ಬರುವ ಕಾಲದಲಿ ಹರಿ।ಕರುಣವಿರಲೆಂದು ಪೇಳಿದಾ ॥ 54 ॥
ಪ್ರಾಣಸಖಗಪಮೃತ್ಯುವೊದಗಿರೆ। ವೇಣುಗೋಪಾಲಕೃಷ್ಣನಾ।
ನಾನಾಪರಿಯಲಿ ಪ್ರಾರ್ಥಿಸಿನ್ನು। ಹಾನಿ ಹಿಂದಕೆ ಮಾಡ್ದನಾ ॥ 55 ॥
ದುರುಳ ಮಾಯ್ಗಳ ಪುರಕೆ ಪೋಗಿ। ಹರಿಯೆ ಪರನೆಂದು ಪೊಗಳುವ।
ಭರದಿ ಬಂದವರೆಲ್ಲ ವಾದಿಸೆ। ಹರುಷದಿಂದಲಿ ಜೈಸುವಾ ॥ 56 ॥
ದ್ವಿಜನು ವಿಜಯರಾಯರನು। ನಿಜಸ್ವರೂಪವ ಕೇಳ್ದನು।
ಸುಜನ ಶಿರೋಮಣಿ ಮುಕ್ತಿಯಲಿ ಕಾಕ।ನಿಜವೆನುತ ಸ್ತುತಿ ಮಾಡ್ದನು ॥ 57 ॥
ನುಡಿದ ವಚನವ ಕೇಳಿ ವಿಪ್ರನು। ಮಿಡುಕಿದನು ಬಲು ಮನದಲಿ।
ಸಡಗರದಿ ಗುರುವಿಜಯರಾಯರು। ದೃಢ ಪೇಳಿಹ ನಿಜವೆನುತಲಿ ॥ 58 ॥
ಭವವಿಮೋಚನ ಮಾಳ್ವ ನದಿಯೊಳು। ಅವಗಹನ ಸ್ನಾನ ಮಾಡುತಾ।
ಪವನ ಪಿತ ಅಹೋಬಲ ನೃಸಿಂಹನ। ಕವನರೂಪದಿ ಸ್ಮರಿಸುತ ॥ 59 ॥
ಹರುಷದಲಿ ಸತ್ಯಬೋಧರಾಯರ ದರುಶನಕೆ ಪೋಗಿನಿಲ್ಲಲು।
ತ್ವರದಿ ಮೂವರು ಸ್ತುತಿಯ ಮಾಡೆನೆ। ಸರಸದಿಂದಲಿ ಪಾಡಲು ॥ 60 ॥
ಭರದಿ ವೆಂಕಟನೃಸಿಂಹಾರ್ಯರು। ಬರಲು ಚರಣಕೆ ನಮಿಸುತಾ।
ಅರಸಿ ಆಜ್ಞವೆ ಮುಖ್ಯ ನಿಮಗೆಂದು। ಸರಸ ವಚನಗಳಾಡುತಾ ॥ 61 ॥
ಬಂದ ಬಗಿಯನು ತಿಳಿದು ನಿಮಗಿ।ಷ್ಟೊಂದು ಚಿಂತೆ ಯಾತಕೆಂದನು।
ಮುಂದೆ ಬಗಿಯನು ತಿಳಿದು ನಿಮಗಿ।ಷ್ಟೊಂದು ಚಿಂತೆ ಯಾತಕೆ ಎಂದನು।
ಮುಂದೆ ತರಳನು ಮಾಳ್ವಚರಿತೆಯ। ಮಂದಹಾಸದಿ ಪೇಳ್ದನು ॥ 62 ॥
ಮಂಗಳ ಪ್ರದವಾದ ನಿವೃತ್ತಿಸಂಗಮದಿ ಸ್ನಾನವ ಮಾಡಿದ।
ಗಂಗೆ ಮೊದಲಾದಖಿಳ ನದಿಗು।ತ್ತುಂಗ ಸ್ಥಳಯೆಂದು ಪೇಳಿದ ॥ 63 ॥
ಮೋದದಲಿ ತತ್ತ್ವಸಾರ ಪದ ಸುಳಾದಿಗಳು ಉಗಾಭೋಗವಾ।
ಬೋಧಪೂರ್ಣರ ಶಾಸ್ತ್ರಸಮ್ಮತ।ವಾದ ಕವನವ ಪೇಳುವಾ ॥ 64 ॥
ತನಯ ಅನುಜರಧನದಗೋಸುಗ। ವಿನಯದಿಂದಲಿ ಕಳುಹಿದಾ।
ಅನುಜನೋರ್ವಗೆ ಮುಂದಿನಾಸ್ಥಿತಿ। ಕನಸಿನಂದದಿ ಪೇಳಿದಾ ॥ 65 ॥
ಸಣ್ಣವರದುಸಕಾಗಿ ಶ್ರೀಹರಿ। ಯನ್ನು ಬಿನ್ನೈಸೀದನೂ।
ಎನ್ನ ಸ್ವಾಮಿಯ ಮಹಿಮೆ ಧರೆಯೊಳ।ಗಿನ್ನೂ(ನೂ)ರೊರುಷೆಂದು ಪೇಳ್ದನು ॥ 66 ॥
ಹಿಂದೆ ಅನುಭವಜನ್ಮ ಚತುರ್ದಶ। ಇಂದು ಈ ಜನುಮವೆಂದದು।
ಮುಂದೆರಡು ಜನ್ಮದ ಸುಚರಿಯಾ। ನಂದದಲಿ ಕೇಳೆಂದನು ॥ 67 ॥
ಕ್ಷಿತಿಯೊಳಗೆ ಗುರುವ್ಯಾಸತತ್ತ್ವಜ್ಞರ।ಸುತನೆನಿಸಿಸಚ್ಛಾಸ್ತ್ರವಾ।
ಪ್ರತಿದಿನದಿ ಪ್ರವಚನ ಮಾಡುತ। ಹುತಭುಜನ ಮುದ ಬಡಿಸುವಾ ॥ 68 ॥
ಎನ್ನ ಸ್ಥಾನಕೆ ಸೇರುವೆಯೋ ನೀ।ನಿನ್ನ ವಂಶಾ ಎನ್ನದು ।
ನಿನ್ನ ವಂಶದಿ ಘನ್ನನೆನಸುವೆ। ಇನ್ನು ಸಂಶಯ ಸಲ್ಲದು ॥ 69 ॥

ಅನುಜ ಕೇಳ್ ಪಾಚಕನು ಜಲಧರ। ಗಣಿತಜ್ಞಾನಿ ಚಿಕಿತ್ಸಕಾ।
ಮುನಿಯ ಪ್ರಮುಖರು ನಿನ್ನ ವಂಶದಿ(ಉದರದಿ) ಜನಿಸಲು ಘನಬಾಲಕಾ ॥ 70 ॥
ಮಾತೃಗರ್ಭದೊಳಿರಲು ಮೃಣ್ಮಯ। ಪಾತ್ರಿಯಲಿ ಜಲಪಾನವ।
ಧಾತ್ರಿಯೊಳು(ದಾವಸ್ತ್ರೀಯಳು) ಇಚ್ಛೈಸುವವಳಾ। ಪುತ್ರ ಭಾವವನೈದುವಾ ॥ 71 ॥
ಪುಟ್ಟಿದಾ ದ್ವಾದಶವತ್ಸರದೊಳುತ್ಕೃಷ್ಟ ಮಹದಾರಿದ್ರವಾ।
ಅಟ್ಟುಳಿಗೆ ಬಾಯ್ ಬಿಡುವ ಜನಕನ। ಕಷ್ಟ ಪರಿಹರ ಮಾಡುವಾ ॥ 72 ॥
ಊರ್ವಿಯೊಳು ನಾ ನಿಟ್ಟನಾಲುಕು। ಉರ್ವರಿತ ಭಾಂಡಗಳನು।
ಗುರ್ವನುಗ್ರಹದಿಂದ ತೆಗೆದು। ಸರ್ವರಿಗೆ ಸುಖ ಕೊಡುವನು ॥ 73 ॥
ಅವನೆ ಧನ್ಯ(ಘನ್ನ)ನು ಎನ್ನ ಧನ ತೆಗೆದವನೆ ವೆಚ್ಚಾ ಮಾಳ್ಪನು।
ಅವನೆ ಎನ್ನಸ್ಥಿಗಳನೊಯಿದು। ದೇವನದಿಗರ್ಪಿಸುವನು ॥ 74 ॥
ಎಷ್ಟು ಪೇಳಲಿ ಎನ್ನ ವಂಶದಿ। ಪುಟ್ಟಿದವರಿಗೆ ಪೇಳ್ವದು।
ಧಿಟ್ಟ ಗುರುಗಳು ಕೊಟ್ಟ ಅಂಕಿತವಿಟ್ಟು ಪದಗಳ ಮಾಳ್ಪದು ॥ 75 ॥
ಭಕ್ತಿಯಲಿ ಇವಗ್ಯಾರು ಸರಿಯೆಂಬ। ಉಕ್ತಿ ಗುರುಗಳ ವಾಕ್ಯವು।
ಮುಕ್ತಿಸುಖವಿಚಿತ್ರ ಪೇಳುವೆ ವಿರಕ್ತರಾ ಯುಕ್ತಿ ದ್ವಾರವು ॥ 76 ॥
ಮಂದಮತಿ ನಾನಿವರ ಗುಣಗಳು। ಒಂದನಾದರು ಅರಿಯೆನು।
ಇಂದಿರೇಶನು ನುಡಿಸಿದದು ಆನಂದದಲಿ ಸಂಸ್ತುಸಿಪೆನು ॥ 77 ॥
**ಭಾ** ಎನಲು ಭಕುತಿಯನು ಪುಟ್ಟಿಸಿ। ಕಾಯಕ್ಲೇಶವ ಕಳೆವನೂ ॥
**ಗಾ**(ಗ) ಎನಲು ಭವದೂರ ಮಾಳ್ಪನು। **ಣ್ಣಾ** ಎನಲು ಮುಕ್ತಿಕೊಡುವನು ॥ 78 ॥
ಇವರ ನಾಮ ಓಂಕಾರ ಪೂರ್ವಕ। ಸ್ತವನ ಮಾಡಲು ಪವನನು।
ತ್ರಿವಿಧಲಿಂಗವ ವಿರಜೆಯಲಿ ಕಳೆದವರ ಮುಕ್ತರೊಳಿಡುವನು ॥ 79 ॥
ಉದಯಕಾಲದಿ ಪದವ ಪಠಿಸಲು। ಮದಡಗಾದರು ಜ್ಞಾನವ।
ಒದಗುವದು ಸಂದೇಹವಿಲ್ಲದು। ಪದುಮನಾಭನ ಕರುಣವಾ ॥ 80 ॥
**ಏಕದಂತನೆ ಅಂಶದಲಿ** ಭೂಲೋಕದಲಿ ಅವತರಿಸಿದಾ।
ತಾ ಕಳೇವರವನು ಧರಿಸಿ ಶ್ರೀಕಳತ್ರನ ತುತಿಸುವಾ ॥ 81 ॥
ಎರಡು ವಿಂಶತಿ ವರುಷಕೆ ಈ। ಚರಿಯವ ಮಾಡಿದಾ।
ಪರಮ ಹರುಷದಿ ಶ್ವಾಸಬಂಧಿಸಿ। ಕರಣ ಮಾರ್ಗದಿ ಶಿರವ ಭೇದಿಸಿ ತೆರಳಿದಾ ॥ 82 ॥
ಸೃಷ್ಟಿಯೊಳು ಚಿತ್ರಭಾನು ಪುಷ್ಯ ಕೃಷ್ಣಾಷ್ಟಮಿ ರವಿವಾರದಿ।
ಬಿಟ್ಟು ದೇಹವ ತಂದೆಗೋಪಾಲವಿಠ್ಠಲನ ಪದಧ್ಯಾನದಿ ॥ 83 ॥

॥ ಶ್ರೀಗುರುಮಧ್ವೇಶಾರ್ಪಣಮಸ್ತು ॥

## ಶ್ರೀಗಣೇಶಾಂಶರಾದ ಶ್ರೀಭಾಗಣ್ಣ (ಶ್ರೀಗೋಪಾಲ)ದಾಸರ ಚರಿತ್ರೆಯ ಸಾರ ಸಂಗ್ರಹ

ಶ್ರೀಗೋಪಾಲದಾಸರರಾಯರಿಗೆ ಶ್ರೀವಿಜಯರಾಯರೇ ನಿಯತ ಗುರುಗಳು, ಇವರು ಶ್ರೀವಿಜಯ ರಾಯರಿಂದ ನೀಡಲ್ಪಟ್ಟ ಶ್ರೀವಿಜಯವಿಠ್ಠಲ ಮೂರ್ತಿಯನ್ನೇ ಪ್ರತಿಕ್ಷಣದಲ್ಲೂ ಗುರುಗಳಾದ ಶ್ರೀವಿಜಯ

ರಾಯರ ಸ್ಮರಣೆಯೊಂದಿಗೆ ಉಪಾಸನೆ ಮಾಡುತ್ತಿದ್ದರು. ರಾಯಚೂರು ಜಿಲ್ಲೆಯ ಮೊಸರ್‌ಕಲ್ಲು ಎಂಬ ಗ್ರಾಮದಲ್ಲಿ ಋಕ್‌ಶಾಖಾಧ್ಯಾಯಿಗಳಾಗಿ ಹರಿತ್ಸಗೋತ್ರದ ಶ್ರೀಮುದ್ಗಲ್ ಭೀಮಣ್ಣನೆಂಬುವರ ಪುತ್ರರಾದ ಶ್ರೀ ಮುದ್ಗಲ್ ಮುರಹರಿರಾಯರ ನಾಲ್ಕು ಗಂಡು ಮಕ್ಕಳಲ್ಲಿ ಜ್ಯೇಷ್ಠಪುತ್ರನಾಗಿ ಉದ್ಭವಿಸಿದರು. ಇವರಿಗೆ ಭಾಗಣ್ಣನೆಂಬುದಾಗಿ ನಾಮಕರಣವಾಯಿತು – ನುಡಿ 1 ರಿಂದ 3 ರವರೆಗೂ

ಕೊಂಚುವಾಗೆ = ಶ್ರೀಗೋಪಾಲದಾಸರ ಜನನಾರಭ್ಯ 5ನೇ ವರ್ಷಕ್ಕೆ ಬಡತನ ಬಂದದ್ದು – ನುಡಿ4, ನಾಲ್ಕು ಮಕ್ಕಳ ಸಹಿತ ತಾಯಿ ಸಂಕಾಪುರಕ್ಕೆ ಬಂದು ನಿಂತದ್ದು – ನುಡಿ 5, ಮಕ್ಕಳನ್ನು ಸಲಹಲು ಹೊಲಗಳಲ್ಲಿ ಕಣಭಿಕ್ಷವನ್ನು ಮಾಡಿದ್ದು – ನುಡಿ 6

ಶ್ರೀದಾಸರ 7ನೇ ವರ್ಷದಲ್ಲಿ ವಟವೃಕ್ಷದ ಕೆಳಗೆ ಮಲಗಿರುವಾಗ ಸರ್ಪಬಂದು ತಲೆಯ ಬಳಿ ಹೆಡೆ ಬಿಚ್ಚಿ ಆಡಿದ್ದು, ಇದನ್ನು ನೋಡಿದ ಜನ ಆಶ್ಚರ್ಯಪಟ್ಟಿದ್ದು, ತಾಯಿ ಈ ಮಹಿಮೆಕಂಡು ಲಕ್ಷ್ಮೀರಮಣನೇ ಇವರ ರಕ್ಷಕನೆಂದು ಸಂತೋಷಪಟ್ಟಿದ್ದು, ಉತ್ತನೂರಿನಲ್ಲಿರುವ ವೆಂಕಟೇಶನ ಗುಡಿಯಲ್ಲಿ ಕೃಷ್ಣನನ್ನು ಒಲಿಸಿಕೊಂಡಿದ್ದು, ಜನರಿಗೆ ಕೃಷ್ಣನು ನಾಟ್ಯವಾಡುವಾಗೆ ಗೆಜ್ಜೆಯ ಧ್ವನಿಕೇಳಿಸಿದ್ದು – ನುಡಿ 7 ರಿಂದ 12 ರವರೆಗೆ

ಗಾಯತ್ರೀ ಜಪದೊಂದಿಗೆ ತಪಸ್ಸನ್ನು ಮಾಡುತ್ತಾ ಮೌನವ್ರತವನ್ನಾಚರಿಸುತ್ತಿರುವಾಗ ದುಷ್ಟರು ಇಷ್ಟು ಚಿಕ್ಕ ಹುಡುಗನ ತಪಸ್ಸೇನು ಎಂದು ತಪಸ್ಸಿಗೆ ಬಿಸಿನೀರನ್ನು ಎರಚಿ ತೊಂದರೆ ಕೊಟ್ಟಾಗ, ತೊಂದರೆ ನೀಡಿದವರ ಮೈಮೇಲೆ ಬರೆಗಳು ಮೂಡಿದವು. ಶೈವನೊಬ್ಬನು ಕವಿತ್ವದಲ್ಲಿ ಜಯಪತ್ರಿಕೆಯನ್ನು ನೀಡಲು ಕೇಳಿದಾಗ ಅವನನ್ನು ಕವಿತ್ವದಲ್ಲಿ ಸೋಲಿಸಿದರು. ತಮ್ಮಂದಿರು ಗದ್ವಾಲಿನ ಸೋಮಭೂಪಾಲನ ಬಳಿ ಸೇವೆಯಲ್ಲಿರುವಾಗ ಅವರಿಗೆ ತೊಂದರೆ ಉಂಟಾಗಲು ಅದನ್ನು ತಮ್ಮ ದಿವ್ಯಶಕ್ತಿಯಿಂದ ತಪ್ಪಿಸಿದರು – ನುಡಿ 13 – 18

ಗಾಯತ್ರಿಯ ಸಿದ್ಧಿಯಿಂದ ಭವಿಷ್ಯವನ್ನು ಹೇಳುತ್ತಿರುವಾಗ ಯಥೇಚ್ಛವಾಗಿ ದ್ರವ್ಯಸಂಪಾದನೆಯಾಯಿತು. ತಾಯಿ ವೆಂಕಮ್ಮನವರು ತಾವು ಹಿಂದೆ ಪಟ್ಟ ಬವಣೆಯಿಂದ, ಮುಂದೆ ಆಪತ್ತಿಗಾಗಲಿ ಎಂದು ಏಳು ಕಣಜದಷ್ಟು ಧಾನ್ಯವನ್ನು ಸಂಗ್ರಹಿಸಿಡಲು, ಅದು ಕ್ರಿಮಿಯ ರಾಶಿಯಾಯಿತು, ನಂತರ ದಾಸರು ಮೂರನ್ನು ಬ್ರಾಹ್ಮಣರಿಗೆ ನೀಡಿ, ಮಿಕ್ಕ ನಾಲ್ಕನ್ನು ಮುಂದಿನ ಕಾಲಕ್ಕೆ ಇರಲಿ ಎಂದರು – ನುಡಿ 19 – 22.

ಶ್ರೀಹರಿಯ ಧ್ಯಾನದಿಂದ ಪಡೆದ ಸಿದ್ಧಿಯಿಂದ ಜನರ ಭವಿಷ್ಯವನ್ನು ಹೇಳುತ್ತಿದ್ದರು. ಒಮ್ಮೆ ಐಜಿ ವೆಂಕಟರಾಮಾಚಾರ್ಯ(ಶ್ರೀವ್ಯಾಸತತ್ತ್ವಜ್ಞ)ರೊಂದಿಗೆ ತತ್ತ್ವವಿಚಾರ ಮಾಡುತ್ತಿರುವಾಗ ಸಂಧ್ಯಾವಂದನೆಯ ಕಾಲವು ಮೀರಿರಾತ್ರಿಯಾಗಿರುವಾಗ ಅರ್ಘ್ಯನೀಡುವ ಸಂದರ್ಭದಲ್ಲಿ ಸೂರ್ಯನು ಕಾಣಿಸಿಕೊಂಡು ಅರ್ಘ್ಯವನ್ನು ಸ್ವೀಕರಿಸಿದ. ಈ ಎಲ್ಲ ಚರಿತ್ರೆಯನ್ನು ಕೇಳಿ ಸೋಮಭೂಪಾಲನು ಇವರ ದರ್ಶನಕ್ಕೆ ಬರಬೇಕೆಂದು ಅಪ್ಪಣೆಬೇಡಿ, ದಾಸರ ಉಪಯೋಗಕ್ಕೆಂದು ಕುದರೆಯನ್ನು ನೀಡಿದಾಗ ನಿನಗೆ ದೊರೆತನವು ಜೀವನಪರ್ಯಂತ ಇರುತ್ತದೆ ಎಂದು ದಾಸರು ನುಡಿದರು – ನುಡಿ 23 – 27

ಆದೋನಿಯಲ್ಲಿ ದಿವಾನ್ ತಿಮ್ಮಣನರಲ್ಲಿ ಸ್ನೇಹದಿಂದ ಇರುವಾಗ, ಅಲ್ಲಿಯ ಮಂಗರಾಯ ಗುಡಿಯಲ್ಲಿ ಭವಿಷ್ಯವನ್ನು ಹೇಳುತ್ತಿದ್ದರು. ವೆಂಕಟಕೃಷ್ಣನೆಂಬ ಅಂಕಿತದಿಂದ ಪದಗಳನ್ನು ಮಾಡುತ್ತಿದ್ದರು. ಶ್ರೀವೆಂಕಟೇಶನ ದಾಸರಾದ ಶ್ರೀವಿಜಯರಾಯರು ಇದೇ ಮಂಗರಾಯನ ಗುಡಿಯಲ್ಲಿ ಗೋಪಾಲವಿಠ್ಠಲ ಎಂದು ಅಂಕಿತ ನೀಡಿದಾಗ ಹಲವು ಜನ್ಮಗಳ ಪುಣ್ಯದಿಂದ ನಿಮ್ಮ ಉಪದೇಶವಾಯಿತು ಎಂದು ಗೋಪಾಲದಾಸರು ತಮ್ಮ ಗುರುಗಳ ಉಪಕಾರ ಸ್ಮರಣೆಯನ್ನು ಮಾಡಿದರು – ನುಡಿ 28 – 31

ಶ್ರೀವಿಜಯರಾಯರನ್ನು ಉಡುಪಿ ಯಾತ್ರೆಗೆಂದು ಅಪ್ಪಣೆ ಬೇಡಿದಾಗ ಅವರು – ಒಂದು ಕೈಯ್ಯಲಿ ಖಡ್ಗ। ಒಂದು ಕೈಯ್ಯಲಿ ಹಲಗೆ। ಅಂದವಾಗಿ ಪಿಡಿದುಕೊಂಡು ದಿವಾರಾತ್ರಿಯಲ್ಲಿ ಬಂದು ಬದಿಯಲಿ ನಿಂದು ನಿತ್ಯ ಬಾರಾಸನಾಗಿ। ಹಿಂದು ಮುಂದುಪದ್ರವವಾಗದಂತೆ। ಇಂದಿರೇ ರಮಣ ಕಾಯುತ್ತಲಿರೆ

ಎನಗಾವ। ಬಂಧಕಗಳು ಇಲ್ಲ। ಧನ್ಯ ಧನ್ಯ ಕಂದರ್ಪನಯ್ಯ ಸಿರಿವಿಜಯವಿಠ್ಠಲರೇಯಾ। ದೇವ ಎಂದೆಂದಿಗಾಪತ್ತು ಬರಲೀಸನೋ॥ ಎಂಬ ಉಗಾಭೋಗವನ್ನು ರಚಿಸಿಕೊಟ್ಟರು. ಮಂಡಗದ್ದೆ ಭೀಮನೆಂಬ ಖಳನು ದಾಸರನ್ನು ದರೋಡೆ ಮಾಡಲು ಯತ್ನಿಸಿ ಶರಣಾಗತನಾದನು, ಇಂದಿಗೂ ಸಹ ಈ ಉಗಾಭೋಗವನ್ನು ಸರ್ವ ಆಪತ್ತುಗಳ ಪರಿಹಾರಕ್ಕಾಗಿ ಪಠಿಸುವುದು ಬಳಕೆಯಲ್ಲಿದೆ. ಶ್ರೀವಿಜಯರಾಯರು ತಮ್ಮ ಉಪಾಸ್ಯ ಮೂರ್ತಿಯಾದ ವಿಜಯವಿಠ್ಠಲನ್ನು ತಮ್ಮ ಪುಣ್ಯದ ಪುತ್ರರಾದ ಶ್ರೀಗೋಪಾಲದಾಸರಿಗೆ ನೀಡಿದರು - ನುಡಿ 32- 36

ರಾಜವಳಿಗ್ರಾಮದಲ್ಲಿದ್ದಾಗ ಅಲ್ಲಿನ ಜನರ ಬೇಡಿಕೆಯಂತೆ ಭೀಕರವಾದ ಬರಗಾಲವನ್ನು ಕಳೆದರು, ಪಲ್ಯದಲ್ಲಿ ಉಪ್ಪಿನ ಅಂಶವು ಹೆಚ್ಚಾಗಿದ್ದನ್ನು ತಮ್ಮ ಜ್ಞಾನದೃಷ್ಟಿಯಿಂದ ತಿಳಿದು ಲವಣಾಭಿಮಾನಿ ಜನಾರ್ದನನ ಪ್ರಾರ್ಥನೆಯಿಂದ ಸರಿಮಾಡಿದರು. ರಾಜನ ಸೇವೆಯಿಂದ ತಮ್ಮ ತಮ್ಮಂದಿರನ್ನು ಪುನಃ ಉತ್ತನೂರಿಗೆ ಕರೆಸಿಕೊಂಡರು ನುಡಿ 37 – 40

ಎರಡನೇ ಬಾರಿ ತಮ್ಮ ತಮ್ಮಂದಿರೊಡನೆ ಉಡುಪಿಯಾತ್ರೆ ಮಾಡಿದ್ದು, ಶ್ರೀರಂಗದಲ್ಲಿ ನಿಂದಾಸ್ತುತಿ ರಚಿಸಿದರು, ಒಮ್ಮೆ ಬ್ರಾಹ್ಮಣರ ಇಚ್ಛಾಭೋಜನವನ್ನು ಮಾಡಿಸಿದರು, ಪಾಂಡುರಂಗನು ಆಲೆನಾಹಿ ಎಂದರೆ ಬರಲಿಲ್ಲ ಎಂದು ಮರಾಠಿಯಲ್ಲಿ ಪಂಢರಪುರಕ್ಕೆ ಬರಲು ಆಹ್ವಾನಿಸಿದ್ದು, ಕ್ಷೀರಾಭಿಷೇಕ ಮಾಡಲು ಕೋರಿ ಹೆಣ್ಣು ಮಗಳೊಬ್ಬಳು ದಾಸರ ಊರ ಹೊರಗೆ ಇದ್ದಾಗ ಹಾಲನ್ನು ತಂದು ಕೊಟ್ಟಾಗ ಅದನ್ನು ಅಲ್ಲೇ ಮಣ್ಣಲ್ಲಿ ಸುರಿದದ್ದು ಆಕೆ ಅಭಿಷೇಕದ ಹಾಲೆಲ್ಲಾ ಮಣ್ಣು ಪಾಲಾಯಿತು ಎಂದಾಗ, ಗುಡಿಗೆ ಹೋಗಿ ನೋಡಲು ಹೇಳಿದಾಗ, ಆ ಕ್ಷೀರವು ವೆಂಕಟೇಶನ ಗುಡಿಯಲ್ಲಿ ದೇವರ ಬಾಯಿಂದ ಬಂದದ್ದು – ನುಡಿ 41- 47

ಶ್ರೀಜಗನ್ನಾಥ ದಾಸರು ವಿಜಯರಾಯರನ್ನು ತಿರುಮಲೆಯಲ್ಲಿ ಕಂಡು ರೋಗಪರಿಹರಿಸಲು ಬೇಡಿದಾಗ ಉತ್ತನೂರಿಗೆ ಹೋದರೆ ಅಲ್ಲಿ ಶ್ರೀಗೋಪಾಲದಾಸರಿಂದ ಪರಿಹಾರವಾಗುತ್ತದೆ ಎಂದದ್ದು, ಅವರ ಮಾತಿನಂತೆ ಉತ್ತನೂರಿಗೆ ಬಂದಾಗ ಶ್ರೀಗೋಪಾಲದಾಸರು ಭಕ್ತಿಯನ್ನು ಧನ್ವಂತರಿ ಸ್ತುತಿಯಿಂದ ಅಭಿಮಂತ್ರಿಸಿ ತಮ್ಮ ಆಯಸ್ಸಿನಲ್ಲಿ ನಲ್ವತ್ತು ವರ್ಷ ಆಯಸ್ಸನ್ನು ನೀಡಿದ್ದು. ನುಡಿ 48 – 50

ಮಹಾಲಕ್ಷ್ಮಿಯ ದರ್ಶನಕ್ಕೆ ಕೊಲ್ಲಾಪುರ ಯಾತ್ರೆ, ವೇಣುಗೋಪಾಲದಾಸರಿಗೆ ಜ್ವರವನ್ನು ಕಳೆದದ್ದು ಮಂತ್ರಾಲಯದಲ್ಲಿ ರಾಯರ ದರ್ಶನ ಮಾಡಿದ್ದು, ಮುಂದೆ ಮಂತ್ರಾಲಯದಲ್ಲಿ ನಡೆಯುವ ಮಹಿಮೆಗಳನ್ನು ಧರೆಯೊಳಗೆ ನಮ್ಮ ಗುರುರಾಘವೇಂದ್ರರಾಯರ ಎಂದು ಪ್ರಾರಂಭವಾಗುವ ಸುಳಾದಿ ರಚಿಸಿ ತಿಳಿಸಿದ್ದು ನುಡಿ 51- 52

ತಮ್ಮ ತಮ್ಮನಿಗೆ ತಿರೋಧಾನ ಪರಿಹರಿಸಿದ್ದು, ಸ್ನೇಹಿತರಾದ ವೇಣುಗೋಪಾಲ(ಪಂಗನಾಮದ ತಿಮ್ಮಣ್ಣ)ದಾಸರ ಅಪಮೃತ್ಯು ಪರಿಹರಿಸಿದ್ದು, ಸ್ವಮತ ದೀಕ್ಷೆಯನ್ನು ಮೆರೆದದ್ದು, ಆಯಾ ಜೀವರ ಸ್ವರೂಪಾನುಭವ ಅನುಭವಿಸುವುದೇ ಮುಕ್ತಿ ಎಂಬ ತತ್ತ್ವವನ್ನು ಶ್ರೀವಿಜಯರಾಯರ ಆಣತಿಯಂತೆ ತಿಳಿಸಿದ್ದು- ನುಡಿ 53 – 58

ಅಹೋಬಲನರಸಿಂದನ ಸಂದರ್ಶನ, ಸತ್ಯಬೋಧರ ಸಂದರ್ಶನ ಹಾಗೂ ಮೂರು ಜನ ಅಣ್ಣತಮ್ಮಂದಿರು ಕೂಡಿ ಒಂದೇ ಪದವನ್ನು ತಮ್ಮ ಅಪರೋಕ್ಷದಿಂದ ರಚಿಸಿದ್ದು. ಐಜಿಸ್ವಾಮಿಗಳ ತಂದೆಗಳಾದ ವೆಂಕಟನರಸಿಂಹಾಚಾರ್ಯರಿಗೆ ನಿಮ್ಮ ಮಗನೂ ಕೂಡ ಉತ್ಕೃಷ್ಟ ಜ್ಞಾನಿಯಾಗುವನು ಎಂದು ಹೇಳಿದ್ದು, ನಿವೃತ್ತಿಸಂಗಮದ ಯಾತ್ರೆಮಾಡಿದ್ದು, ಶ್ರೀಮದಾಚಾರ್ಯರ ಸಿದ್ಧಾಂತಾನುಗುಣವಾಗಿ ತಮ್ಮ ಅಪರೋಕ್ಷದಿಂದ ನಾನಾಬಗೆಯ ಉಗಾಭೋಗ, ಪದ, ಸುಳಾದಿಗಳನ್ನು ರಚಿಸಿದ್ದು – ನುಡಿ 59 – 64

ತಾವು ಪುನಃ ಅವತರಿಸುವ ವಿಷಯವನ್ನು ತಮ್ಮನಿಗೆ ತಿಳಿಸಿದ್ದು, ತಮಗೆ ಇದುವರೆಗೂ 14 ಜನ್ಮಗಳಾಗಿವೆ, ಇಂದು ಈ ಜನ್ಮ ಬಂದಿದೆ, ಇನ್ನು ಮುಂದೆ ಎರಡು ಜನ್ಮಗಳಿವೆ ಎಂದಿದ್ದು. ಶ್ರೀವೆಂಕಟರಾಮಾಚಾರ್ಯರಲ್ಲಿ ಅಗ್ನಿಹೋತ್ರಿಗಳಾದ ಶ್ರೀಗೋಪಾಲಕೃಷ್ಣಾಚಾರ್ಯರಾಗಿ ಜನಿಸುವಿಕೆ, ತಮ್ಮನಿಗೆ ಅಭಯ ನೀಡಿದ್ದು, ತಮ್ಮ ವಂಶದಲ್ಲಿ ನಡೆಯುವ ಘಟನೆಗಳನ್ನು ನಿರೂಪಿಸಿದ್ದು, ತಮ್ಮ ವಂಶದವರು ಗುರುಗಳು ನೀಡಿದ ಅಂಕಿತದಿಂದ ಪದಮಾಡಬೇಕೆಂದು ತಿಳಿಸಿದ್ದು – ನುಡಿ 65 – 75

ಶ್ರೀವಿಜಯರಾಯರಿಂದ ಭಕ್ತಿಯಲಿ ಭಾಗಣ್ಣ ಎಂಬ ಬಿರುದು, ಇಂತಹವರನ್ನು ಆಶ್ರಯಿಸಿದರೆ ಹರಿಕರುಣೆಯಾಗುತ್ತದೆ ಅಂದರೆ ಗುರುವಿನ ದ್ವಾರಾ ಹರಿಪ್ರಸಾದವೆಂಬುದು, ಭಾಗಣ್ಣ ಎಂಬ ನಾಮವನ್ನು ಜಪಿಸುವುದರಿಂದ ಆಗುವ ಫಲ – **ಭಾ** ಎಂದರೆ ಭಕುತಿಯನ್ನು ನೀಡಿ, ಕಾಯಕ್ಲೇಶವನ್ನು ಕಳೆಯುತ್ತಾರೆ, **ಗ** ಎಂದರೆ ಸಂಸಾರವೇ ದೂರಾಗುತ್ತದೆ, **ಣ್ಣಾ** ಎಂದರೆ ಮೋಕ್ಷಸಾಧನೆಯಾಗುತ್ತದೆ, ನಂತರ ಲಿಂಗಭಂಗವಾಗಿ ಮುಕ್ತರಸಂಗವಾಗುತ್ತದೆ, ಉದಯಕಾಲದಲ್ಲಿ ಇದನ್ನು ಪಠಿಸುವುದರಿಂದ ದಡ್ಡನೂ ಕೂಡ ಜ್ಞಾನಿಯಾಗಿ ಹರಿಯ ಕಾರುಣ್ಯವನ್ನು ಪಡೆಯುತ್ತಾನೆ. ಗಣೇಶನೇ ಒಂದು ಅಂಶದಿಂದ ಈ ಭೂಲೋಕದಲ್ಲಿ ಶ್ರೀಗೋಪಾಲ ದಾಸರಾಗಿ ಅವತರಿಸಿದ್ದು.ನಲ್ವತ್ತು ವರ್ಷಗಳಷ್ಟು ಕಾಲ ಈ ರೀತಿಯಾಗಿ ಮಾನವ ಶರೀರದಿಂದ ಭಕ್ತರನ್ನು ಅನುಗ್ರಹಿಸಿ, ಯೋಗಮಾರ್ಗದಿಂದ ಶ್ವಾಸಬಂಧನ ಮಾಡಿ ಬ್ರಹ್ಮರಂಧ್ರದಿಂದ ಪರಮಾತ್ಮನೆಡೆಗೆ ಚಿತ್ರಭಾನು ಸಂವತ್ಸರ ಪುಷ್ಯಮಾಸದ ಕೃಷ್ಣಪಕ್ಷದ ಅಷ್ಟಮೀ ದಿನ ತಂದೆ ಗೋಪಾಲವಿಠ್ಠಲನ ಸ್ಮರಿಸುತಾ ತೆರಳಿದರು ಶ್ರೀವಿಜಯರಾಯರ ಪುಣ್ಯದ ಪುತ್ರರಾದ ಶ್ರೀಗೋಪಾಲದಾಸರು.

ಸಂಗ್ರಹ : ಯಲಮೇಲಿ ಪುಷ್ಪಹಾಸ ಬಾಲಕೃಷ್ಣ
ಬೆಂಗಳೂರು